ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಉಪಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ    ದಿನಾಂಕ : DATE : 4/11/20

# ಉಪಚುನಾವಣೆ: ಶಿರಾದಲ್ಲಿ ಉತ್ಸಾಹ, ಆರ್.ಆರ್.ನಗರದಲ್ಲಿ ನಿರುತ್ಸಾಹ

ಪ್ರಜಾವಾಣಿ ವಾರ್ತೆ 4-11-20

ಬೆಂಗಳೂರು: ಜಿದ್ದಾಜಿದ್ದಿನ ಪೈಪೋಟಿ ನಡೆದಿದ್ದ ತುಮಕೂರು ಜಿಲ್ಲೆಯ ಶಿರಾ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಶೇ 84.54 ಮತ್ತು ಬೆಂಗಳೂರಿನ ಆರ್.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ ಶೇ 45.24ರಷ್ಟು ಮಂಗಳವಾರ ಮತದಾನವಾಗಿದೆ.

ಶಿರಾದಲ್ಲಿ ಆರಂಭದಿಂದಲೂ ಅತ್ಯಂತ ಉತ್ಸಾಹದಿಂದ ಮತದಾನ ನಡೆದರೆ, ಆರ್.ಆರ್.ನಗರದಲ್ಲಿ ನೀರಸ ಮತದಾನವಾಗಿದೆ. ಸಣ್ಣ-ಪುಟ್ಟ ಘಟನೆಗಳನ್ನು ಬಿಟ್ಟರೆ, ಮತದಾನ ಬಹುತೇಕ ಶಾಂತವಾಗಿತ್ತು. ಇದೀಗ ಮೂರು ಪಕ್ಷಗಳು ಮತದಾನದ ಪ್ರಮಾಣದ ಆಧಾರದಲ್ಲಿ ಗೆಲುವಿನ ಲೆಕ್ಕಾಚಾರದಲ್ಲಿ ತೊಡಗಿವೆ.

ಆರ್.ಆರ್.ನಗರದಲ್ಲಿ 2013ರಿಂದ ಈಚೆಗೆ ನಡೆದ ವಿಧಾನಸಭೆ, ಲೋಕಸಭೆ ಚುನಾವಣೆಗಳಿಗೆ ಹೋಲಿಸಿದರೆ ಕ್ಷೇತ್ರದಲ್ಲಿ ಈ ಬಾರಿ ಅತಿ ಕಡಿಮೆ ಪ್ರಮಾಣದ ಮತದಾನವಾಗಿದೆ. ಸರಾಸರಿ ಶೇ 53ರಿಂದ ಶೇ 56.80ರಷ್ಟು ಮತದಾನ ಆಗುತ್ತಿತ್ತು ಎಂದು ಚುನಾವಣಾ ಆಯೋಗ ತಿಳಿಸಿದೆ.

ಶಿರಾ ವಿಧಾನಸಭಾ ಕ್ಷೇತ್ರದಲ್ಲಿ ಈ ಹಿಂದೆ ಅತಿ ಹೆಚ್ಚು ಎಂದರೆ ಶೇ 84.31ರಷ್ಟು ಮತದಾನವಾಗಿತ್ತು. ಈ ಉಪಚುನಾವಣೆ ಆ ದಾಖಲೆಯನ್ನು ಮೀರಿಸಿದ್ದು, ಶೇ 84.54ರಷ್ಟು ಮತದಾನವಾಗಿದೆ. ಅಂತಿಮ ವರದಿ ಬಂದ ಬಳಿಕ ಅದರ ಪ್ರಮಾಣ ಇನ್ನೂ ಹೆಚ್ಚಬಹುದು.

ಶಿರಾದ ಸರ್ಕಾರಿ ವಿಜ್ಞಾನ ಪ್ರಥಮ ದರ್ಜೆ ಕಾಲೇಜಿನ ಮತಗಟ್ಟೆ ಬಳಿ ಮತದಾರರಿಗೆ ಹಣ ಹಂಚಿಕೆ ಮಾಡಲಾಗುತ್ತಿದೆ ಎಂಬ ವಿಚಾರಕ್ಕೆ ಕಾಂಗ್ರೆಸ್-ಬಿಜೆಪಿ ಕಾರ್ಯಕರ್ತರ ನಡುವೆ ಘರ್ಷಣೆ ನಡೆದಿದೆ.

ಆರ್.ಆರ್.ನಗರ ಕ್ಷೇತ್ರದಲ್ಲಿ ಪೊಲೀಸರು ಕೇಸರಿ ಬಣ್ಣದ ಮಾಸ್ಕ್ ಧರಿಸಿದ್ದಾರೆ ಎಂದು ಕಾಂಗ್ರೆಸ್ ಕಾರ್ಯಕರ್ತರು ಆಕ್ಷೇಪ ವ್ಯಕ್ತಪಡಿಸಿದ ಕಾರಣ ಅವರಿಗೆ ನೀಲಿ ಮಾಸ್ಕ್ ನೀಡಲಾಯಿತು. ಕಾಂಗ್ರೆಸ್ -ಬಿಜೆಪಿ ಕಾರ್ಯಕರ್ತರ ಮಧ್ಯೆ ಅಲ್ಲಲ್ಲಿ ನೂಕಾಟ-ತಳ್ಳಾಟ ನಡೆಯಿತು.

ಕೊರೊನಾ ಸೋಂಕಿನ ಕಾರಣ ಎಲ್ಲ ಮತಗಟ್ಟೆಗಳಲ್ಲೂ ಕಟ್ಟುನಿಟ್ಟಿನ ವ್ಯವಸ್ಥೆ ಮಾಡಲಾಗಿತ್ತು. ಪ್ರತಿಯೊಬ್ಬ ಮತದಾರನನ್ನೂ ಥರ್ಮಲ್ ಸ್ಕ್ಯಾನರ್ ಮೂಲಕ ದೇಹದ ಉಷ್ಣಾಂಶವನ್ನು ಪರೀಕ್ಷಿಸಿದ, ಸ್ಯಾನಿಟೈಸರ್ ಮೂಲಕ ಕೈ ಸ್ವಚ್ಛಗೊಳಿಸಿ ಬಳಿಕವಷ್ಟೇ ಮತದಾನಕ್ಕೆ ಅವಕಾಶ ನೀಡಲಾಯಿತು. ಎಲ್ಲ ಮತದಾರರಿಗೂ ರಬ್ಬರ್ ಕೈಗವುಸು ವಿತರಿಸಲಾಯಿತು. ಅದನ್ನು ಧರಿಸಿ ಮತದಾನ ಮಾಡಲು ಸೂಚಿಸಲಾಯಿತು. ಶಿರಾದಲ್ಲಿ 38 ಮಂದಿ ಕೋವಿಡ್ ರೋಗಿಗಳು ಮತ ಚಲಾಯಿಸಿದರು.



ಬೆಂಗಳೂರಿನ ರಾಜರಾಜೇಶ್ವರಿ ಕ್ಷೇತ್ರದ ಮತಗಟ್ಟೆಯೊಂದಕ್ಕೆ ಕೋವಿಡ್ ರೋಗಿಯೊಬ್ಬರು ಮಂಗಳವಾರ ಪಿಪಿಇ ಕಿಟ್ ಧರಿಸಿಕೊಂಡು ಬಂದು ಮತ ಚಲಾಯಿಸಿದರು –ಪ್ರಜಾವಾಣಿ ಚಿತ್ರ

ಜನತಂತ್ರದ ಹಬ್ಬ 2020

## ಬಿಹಾರ: 165 ಕ್ಷೇತ್ರಗಳ ಮತದಾನ ಪೂರ್ಣ

ಪಟ್ನಾ: ಬಿಹಾರ ವಿಧಾನಸಭೆಯ 94 ಕ್ಷೇತ್ರಗಳಿಗೆ ಎರಡನೇ ಹಂತದಲ್ಲಿ ಮಂಗಳವಾರ ಶಾಂತಿಯುತ ಮತದಾನ ನಡೆಯಿತು.

ಶೇ 54ರಷ್ಟು ಮತದಾರರು ಹಕ್ಕು ಚಲಾಯಿಸಿದ್ದಾರೆ. ಮೊದಲ ಎರಡು ಹಂತಗಳಲ್ಲಿ ಅತಿ ಹೆಚ್ಚು ಕ್ಷೇತ್ರಗಳನ್ನು ಗೆಲ್ಲುವ ಮೈತ್ರಿಕೂಟವೇ ಅಧಿಕಾರಕ್ಕೆ ಏರುವ ಸಾಧ್ಯತೆ ಹೆಚ್ಚು. ಹಾಗಾಗಿ, ಎರಡನೇ ಹಂತದ ಮತದಾನ ಮಹತ್ವ ಪಡೆದಿತ್ತು.

243 ಕ್ಷೇತ್ರಗಳ ಪೈಕಿ 165 ಕ್ಷೇತ್ರಗಳ ಮತದಾನ ಮೊದಲ ಎರಡು ಹಂತಗಳಲ್ಲಿ ಪೂರ್ಣಗೊಂಡಿದೆ. ಉಳಿದ ಕ್ಷೇತ್ರಗಳಿಗೆ ಮೂರನೇ ಹಂತದಲ್ಲಿ ಇದೇ 7ರಂದು ಮತದಾನ ನಡೆಯಲಿದೆ.

ಮಹಾಘಟಬಂಧನದ ಮುಖ್ಯಮಂತ್ರಿ ಅಭ್ಯರ್ಥಿ ತೇಜಸ್ವಿ ಯಾದವ್ ಅವರು ಸ್ಪರ್ಧಿಸಿರುವ ರಾಘೋಪುರ ಕ್ಷೇತ್ರದಲ್ಲಿ ಎರಡನೇ ಹಂತದಲ್ಲಿ ಮತದಾನ ನಡೆದಿದೆ. ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ವಿಧಾನ ಪರಿಷತ್ ಸದಸ್ಯರಾಗಿರುವುದರಿಂದ ವಿಧಾನಸಭೆಗೆ ಸ್ಪರ್ಧಿಸಿಲ್ಲ.